**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 348/2023**

ಚಾ.ಸಾ–05, ಪ್ರಾ.ಸಾ–03

| | | |
|---|---|---|
| ಹೆಸರು | : | ಕುಮಾರಿ ಭಾನು |
| ತಂದೆಯ ಹೆಸರು | : | ರೇಚಣ್ಣ |
| ವಯಸ್ಸು | : | 18 |
| ವೃತ್ತಿ | : | ವಿದ್ಯಾರ್ಥಿ |
| ವಾಸ | : | ತೊಟ್ಟವಾಡಿ ಗ್ರಾಮ, ತಿ. ನರಸೀಪುರ ತಾಲ್ಲೂಕು |

**ದಿನಾಂಕ 28.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ–6 ನನ್ನ ಸ್ನೇಹಿತೆ. ಕಳೆದ ಎರಡು ವರ್ಷಗಳ ಹಿಂದೆ ನಾನು ಮತ್ತು ಚಾಸಾ–6 ರವರು ತಿ. ನರಸೀಪುರದಿಂದ ಕುರುಬೂರಿಗೆ ಎಸ್.ಎಂ.ಆರ್. ಖಾಸಗಿ ಬಸ್‌ನಲ್ಲಿ ಹೋಗುತ್ತಿರುವಾಗ ಮಧ್ಯಾಹ್ನ 2.10 ಗಂಟೆ ಸಮಯದಲ್ಲಿ ಕುರುಬೂರು ಗ್ರಾಮದ ಹತ್ತಿರ ಅಪಘಾತವಾಗಿದ್ದು, ಆ ಬಸ್‌ನ ಚಾಲಕನಾದ ನ್ಯಾಯಾಲಯದಲ್ಲಿರುವ ಆರೋಪಿತ ಆ ಬಸ್‌ನ್ನು ಅತಿವೇಗವಾಗಿ ಚಾಲನೆ ಮಾಡಿದ್ದನು. ಆ ಬಸ್ಸಿನಲ್ಲಿ 25–30 ಜನರಿದ್ದರು.

ಅಪಘಾತವು ಆ ಖಾಸಗಿ ಬಸ್ ಮತ್ತು ಇನೋವಾ ಕಾರಿನ ನಡುವೆ ಆಗಿರುತ್ತದೆ. ನನ್ನ ತಲೆಗೆ ಪೆಟ್ಟಾಗಿತ್ತು. ನನ್ನನ್ನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಆನಂತರ, ನನ್ನನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಸೇರಿಸಲಾಯಿತು.

ಅಪಘಾತದಲ್ಲಿ ಬೇರೆಯವರಿಗೆ ಏನಾಯಿತು ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಅಪಘಾತದಿಂದ ಆ ಬಸ್‌ನ ಮುಂಭಾಗ ಜಖ: ಆಗಿತ್ತು ಮತ್ತು ಆ ಕಾರಿನ ಮುಂದಿನ ಅರ್ಧ ಭಾಗ ಜಖ: ಆಗಿತ್ತು ಎಂದರೆ ಸರಿ. ಅಪಘಾತದಿಂದ ಆ ಕಾರಿನ ಚಾಲಕ ಸೇರಿ ಅದರಲ್ಲಿ ಪ್ರಯಾಣ ಮಾಡುತ್ತಿದ್ದವರು ಸೇರಿ 10 ಜನರು ಮರಣ ಹೊಂದಿದರು ಎಂದರೆ ಸರಿ. ಅಪಘಾತದಿಂದ ಬಸ್‌ನಲ್ಲಿದ್ದ 15-20 ಜನರಿಗೆ ಗಾಯವಾಗಿತ್ತು ಎಂದರೆ ಸರಿ.

ಆ ಬಸ್‌ನ ಸಂಖ್ಯೆ ಕೆಎ-55/2061 ಮತ್ತು ಆ ಕಾರಿನ ಸಂಖ್ಯೆ ಕೆ-02/ಎಡಿ-5184 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

ಸದರಿ ಬಸ್‌ನ ಭಾವಚಿತ್ರವನ್ನು ಈಗ ನೋಡಿ ಗುರುತಿಸಿದ್ದು, ಆ ಭಾವಚಿತ್ರದ ಸಿ.ಡಿ. ಇರದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿಲ್ಲ.

ಸಿಸಿ ಸಂಖ್ಯೆ: 348/2023

**ಪಾಟೀ ಸವಾಲುಃ ಶ್ರೀ ಕೆ.ಕೆ.ಎನ್. ವಕೀಲರಿಂದ ಆರೋಪಿತ ಪರ**

ನಾನು ಅಪಘಾತದ ವೇಳೆಗೆ ತಿ. ನರಸೀಪುರದ ವಿದ್ಯೋದಯ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ. ವ್ಯಾಸಂಗದಲ್ಲಿದ್ದೆ. ಆ ವೇಳೆಗೆ ಕಾಲೇಜಿನ ಅವಧಿ ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಇತ್ತು. ನಾನು ಅದೇ ಬಸ್‌ನಲ್ಲಿ ಪ್ರತಿದಿನ ಪ್ರಯಾಣ ಮಾಡುತ್ತಿದ್ದೆ. ಅಪಘಾತದ ದಿನ ಆ ಬಸ್‌ನ ಹಿಂದಿನ ಆಸನದಲ್ಲಿ ಕುಳಿತಿದ್ದೆ. ಹಾಗಾಗಿ, ಆ ಬಸ್‌ನ ಮುಂದೆ ನನಗೆ ಕಾಣುತ್ತಿರಲಿಲ್ಲ ಎಂದರೆ ಸರಿ.

ಅಪಘಾತದ ಸ್ಥಳದ ರಸ್ತೆಯಲ್ಲಿ ತಿರುವು ಇದೆ ಎಂದರೆ ಸರಿ. ಹಾಗಾಗಿ ಅಲ್ಲಿ ಬಸ್ ನಿಧಾನವಾಗಿ ಚಲಿಸುತ್ತದೆ ಎಂದರೆ ಸರಿ. ಸದರಿ ಬಸ್ ಕೂಡ ಅಲ್ಲಿ ನಿಧಾನವಾಗಿ ಚಲಿಸಿತ್ತು ಎಂದರೆ ಸರಿ.

ಸದರಿ ಕಾರು ಮೂಗೂರು ಕಡೆಯಿಂದ ಬಂದಿತ್ತು. ಸದರಿ ಕಾರು ವೇಗವಾಗಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತಕ್ಕೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**